# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - THURSDAY 22-6-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಭಾರತದ ಜೂನ್ ತಿಂಗಳ ಪಾಮೆಣ್ಣೆ ಆಮದು 46% ಹೆಚ್ಚಳ ಸಾಧ್ಯತೆ

ಜೂನ್ 2023 ರಲ್ಲಿ ಭಾರತದ ಪಾಮೆಣ್ಣೆ ಆಮದು ಹಿಂದಿನ 3 ತಿಂಗಳ ಗರಿಷ್ಠ ಮಟ್ಟಕ್ಕೇರಿ, ಹಿಂದಿನ ತಿಂಗಳಿಗಿಂತ 46% ಹೆಚ್ಚಳವಾಗುವ ಹಾದಿಯಲ್ಲಿದೆಯೆಂದು ಡೀಲರ್‌ಗಳು ರಾಯ್ಟರ್ಸ್‌ಗೆ ತಿಳಿಸಿದ್ದಾರೆನ್ನಲಾಗಿದೆ. ದರ ಹಿಂದಿನ 28 ತಿಂಗಳ ಕನಿಷ್ಠ ಮಟ್ಟದಲ್ಲಿರುವುದರಿಂದ ಖರೀದಿ ಹೆಚ್ಚಳವಾಗಿದೆಯೆನ್ನಲಾಗಿದೆ. ಈ ತಿಂಗಳಲ್ಲಿ ಹಿಂದಿನ ತಿಂಗಳ 439,173 ಕ್ಕಿಂತ ಹೆಚ್ಚಳವಾಗಿ 640,000 ಟನ್‌ಗಳಾಗಬಹುದೆಂದು 5 ಡೀಲರ್‌ಗಳು ಅಂದಾಜಿಸಿದ್ದಾರೆನ್ನಲಾಗಿದೆ. ಮಲೇಶೀಯನ್ ಪಾಮೆಣ್ಣೆ ದರ ಸತತ 2ನೇ ದಿನ ಇಳಿಕೆಯಾಗಿದೆಯೆನ್ನಲಾಗಿದೆ.

## ದಾಸ್ತಾನು ಮಿತಿಯ ಹೊರತಾಗಿಯೂ ಬೇಳೆಕಾಳು, ಗೋಧಿ ದರ ಹೆಚ್ಚಳ

ದಾಸ್ತಾನು ಮಿತಿ ವಿಧಿಸಿದ ಹೊರತಾಗಿಯೂ ಬೇಳೆಕಾಳು, ಗೋಧಿ ದರ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಅದರಲ್ಲೂ ತೊಗರಿ, ತೊಗರಿಬೇಳೆ ದರ ಅತೀ ಹೆಚ್ಚಳವಾಗಿದೆ. ಉದ್ದು ಬೇಳೆ ಹಾಗೂ ಗೋಧಿ ದರಗಳೂ ಹೆಚ್ಚಳವಾಗಿದೆ. ಮುಂಗಾರು ವಿಳಂಬದಿಂದ ಖಾರೀಫ್ ಬಿತ್ತನೆಯೂ ವಿಳಂಬವಾಗುತ್ತಿದೆ.

## ಖಾರೀಫ್ ಬಿತ್ತನೆ ಇಳಿಕೆ, ಅರಸಿನ ದರ ಹೆಚ್ಚಳ

ಅರಸಿನ ಬೆಳೆಯುವ ಪ್ರದೇಶಗಳಲ್ಲಿ ಬಿತ್ತನೆ ಗಣನೀಯ ಇಳಿಕೆಯಾಗುವ ನಿರೀಕ್ಷೆಯಿಂದ ಅರಸಿನ ದರ ಹೆಚ್ಚಳವಾಗಿದ್ದು, ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ. ಆವಕ ಗಣನೀಯ ಇಳಿಕೆಯಾಗಿದೆಯೆನ್ನಲಾಗಿದೆ.

## ಗೋಧಿ, ಜೋಳ ದರ ಹೆಚ್ಚಳ

ಪ್ರಮುಖ ಮಾರುಕಟ್ಟೆಗಳಲ್ಲಿ ಗೋಧಿ ದರ ಕ್ವಿಂಟಾಲ್‌ಗೆ ರೂ.100 ಹೆಚ್ಚಳವಾಗಿದೆಯೆನ್ನಲಾಗಿದೆ. ಆವಕ ಇಳಿಕೆಯಾಗಿರುವುದು ದರ ಹೆಚ್ಚಳಕ್ಕೆ ಕಾರಣವೆನ್ನಲಾಗಿದೆ. ಬೇಡಿಕೆ ಹೆಚ್ಚಳದಿಂದ ದಾವಣಗೆರೆಯಲ್ಲಿ ಜೋಳ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## ಜೀರಿಗೆ ದರ ಮತ್ತೆ ಹೆಚ್ಚಳ

NCDEX ನಲ್ಲಿ ಜೀರಿಗೆ ದರ ಹೆಚ್ಚಳ ತಡೆಗೆ ಮಾಡಿದ ಪ್ರಯತ್ನಗಳ ಹೊರತಾಗಿಯೂ ಜೀರಿಗೆ ದರ ಮತ್ತೆ ಹೆಚ್ಚಳವಾಗಿದೆ. ಜೀರಿಗೆ ದರ ದಾಖಲೆ ರೂ.54000(ಕ್ವಿಂಟಾಲ್‌ಗೆ) ಕ್ಕೆ ಹೆಚ್ಚಳ ಕಂಡಿದೆಯೆನ್ನಲಾಗಿದೆ.